SATYAVADI Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 133 | ಬುಧವಾರ 23—1—46 | ಬಿಡಿ ಪ್ರತಿ 3 ಪೈ

ರಷ್ಯಾದ ಯುಕ್ತಿ ಕಾರ್ಯ ?

ಲಂಡನ್ ಜ 22—— ಸಂಯುಕ್ತ ರಾಷ್ಟ್ರದ ಸಮ್ಮೇಳನದಲ್ಲಿ ರಷ್ಯಾ ಒಂದು ಸೂಚನೆಯನ್ನು ತಂದು, ಗ್ರೀಸ್ ಮತ್ತು ಇಂಡೋನೇಷಿಯಾ ಸಮಸ್ಯೆಯನ್ನು ಯು. ಎನ್. ರಕ್ಷಣ ಸಮಿತಿ ಮುಂದೆ ತರಬೇಕೆಂದಿರುವುದು ಬಾಂಬು ಬಿದ್ದಂತಾಗಿದೆ.

ಟೋಕಿಯೋ ಜ 21— ಜಪಾನಿನ ಯುದ್ಧ ಕೈಗಾರಿಕಾ ಸಂಸ್ಥೆಗಳನ್ನು ಹಿಡಿಯಲು ಮೆಕ್ಆರ್ಥರರ ಆಜ್ಞೆಯಾಗಿದೆ.

ಬೊಂಬಾಯಿ ಜ 21— ಹೆಚ್ಚು ಬೆಲೆ ನೋಟುಗಳ ರದ್ದಿನ ಕಾನೂನು ತರುವುದಕ್ಕೆ ಮುಂಚೆ ಬೊಂಬಾಯಿನಲ್ಲಿ 80 ಸಾವಿರ ಜನರು ತಮ್ಮ ಹಣಗಳನ್ನು ಈ ನೋಟುಗಳಲ್ಲಿಟ್ಟುಕೊಂಡಿದ್ದರಂತೆ.

ಮದರಾಸು ಜ 22— ಅಂಬಟ್ಟೂರಿನಿಂದ ನಿನ್ನೆ ಸಂಜೆ ಮಹಾತ್ಮಾ ಗಾಂಧಿಯವರು ಹಿಂದೂಯಿತ್ತೀನ ನಗರಕ್ಕೆ ಬಂದಾಗ ಭಾರಿ ಜನಸಮೂಹದಿಂದ ಸ್ವಾಗತಿಸಲ್ಪಟ್ಟರು. ಪಾರ್ಲಿಮೆಂಟರಿ ನಿಯೋಗವನ್ನು ನಾಳೆ ಭೇಟಿ ಮಾಡುತ್ತಾರೆ.

ಬೆಂಗಳೂರು ಜ 22— 19 ರಿಂದ 21 ರವರಗೆ ನಡೆದ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯಲ್ಲಿ ಸಂಸ್ಥಾನದ ಆಹಾರ ಪರಿಸ್ಥಿತಿಯು ಚರ್ಚೆಗೆ ಬಂದಿತ್ತು. ಶ್ರೀ ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಕೇಂದ್ರ ಕಾನೂನು ನಿಯಂತ್ರಣಾ ಸಮಿತಿ ರಚಿಸಲಾಯಿತು.

ಫ್ರಾಂಕ್‌ಫರ್ಟ್ ಜ 21— 1839 ರಿಂದೀಚೆಗೆ ಈಗ ನಡೆದ ಸ್ವರ್ಣೋತ್ಸವ ಜಾತ್ರೆಯಲ್ಲಿ 4 ಲಕ್ಷ ಮಂದಿ ಒಟ್ಟುಗೂಡಿ ಭಾಗವಹಿಸಿದ್ದರು.

ಲಂಡನ್ ಜ 21— ಅಣು ಶಕ್ತಿಯಿಂದ ಯುದ್ಧ ನಿಭಾಯಿಸುವುದನ್ನು ತಡೆಗಟ್ಟಲು ಯು ಎನ್. ಒ. ಅಸೆಂಬ್ಲಿಯಲ್ಲಿ 6 ಜನಾಂಗ ಸಮಿತಿ ಸ್ಥಾಪನೆಯು ಒಪ್ಪಿತವಾಯಿತು.

ಸುಕ್ಕೂರು ಜ 21— ಸುಪ್ರಸಿದ್ಧ ಐ. ಎನ್. ಎ. ಲೆ || ಡಿಲಾನಿರಿಗೆ ಅನೇಕ ಸಂಸ್ಥೆಗಳು ನಿಧಿಯನ್ನರ್ಪಿಸಿ ನೋಟಿನ ಮೂಲೆಯನ್ನು ಕೊರಳಿಗೆ ಹಾಕಿ ಸನ್ಮಾನಿಸಿದರು

ಲಂಡನ್ ಜ 21— ಕಾಂಗ್ರೆಸ್ ವಜ್ರೋತ್ಸವಕ್ಕೆ ಸತಿ ರೂಸ್ವೆಲ್ಟ್ ಮತ್ತು ಸತಿ ಚಿಯಾಂಗ್ ಕೈಷೇಕರನ್ನು ಆಹ್ವಾನಿಸಬೇಕೆಂದು ಭಾರತ ಭಾವಿ ಕ ಸಭೆಯವರು ನಿರ್ಣಯಿಸಿದರು

ಶೀತದಿಂದ ಚೇತನ ಹೊಂದಲು ನಗ್ನ ಕನ್ನಿಕೆಯರು

ಶೀತ ಪ್ರದೇಶದಲ್ಲಿ ಹಾರಾಡಿ ಹಿಂದಿರುಗಿದ ವೈಮಾನಿಕರು ಕೆಲವೊಮ್ಮೆ ಚೇತನರಹಿತರಾಗಿ ಬೀಳುತ್ತಾರೆ. ಆಗ ಅವರಲ್ಲಿ ಉಷ್ಣವನ್ನುಂಟುಮಾಡಿ ಚೇತನ ತುಂಬಿಸಲು ಉಷ್ಣವೇರಿಸುವ ಸಾಧನಗಳು ಬೇಕಾಗುತ್ತವೆ ಹರ್ಷಕರ ಗೋರಿಂಗನು ನಾಜೀ ವೈಮಾನಿಕರನ್ನು ಶೀತ ಬಾಧೆಯಿಂದ ಚೇತರಿಸುವಂತೆ ಮಾಡಲು ಚಂದದ ಜಿಪ್ಸಿ ಕನ್ನಿಕೆಯರನ್ನು ನಗ್ನಗೊಳಿಸಿ, ವೈಮಾನಿಕರನ್ನೂ ಕನ್ನಿಕೆಯರನ್ನೂ ಒಂದೇ ಕಂಬಳಿಯಲ್ಲಿ ಸತಿ, ತನ್ಮೂಲಕ ಉಷ್ಣವೇರಿಸುವ ತೀವ್ರ ಪರಿಣಾಮಕಾರೀ ವಿಧಾನವನ್ನು ಹೂಡುತ್ತಿದ್ದನೆಂಬ ವಿಷಯ ಇದೀಗ ಬಹಿರಂಗವಾಗಿದೆ.

ಂ ಂ

ಕೆಂಪು ದನಗಳು ಬಿಳೀ ಬಣ್ಣಕ್ಕೆ ಮಾರ್ಪಟ್ಟವು.

ಮೆಕ್ಸಿಕೋದಲ್ಲಿ ಇತ್ತೀಚೆಗೆ ಎಟಾಮಿಕ್ ಶಕ್ತಿಯಿಂದ ವಿಚಿತ್ರ ಮಾರ್ಪಾಟುಗಳನ್ನು ತರಲು ಸಾಧ್ಯವಾಗಿದೆ ಹೆಯರ್ ಫೋರ್ಡ್ ಎಂಬಲ್ಲಿ ಅಟಾಮಿಕ್ ಶಕ್ತಿಯು ಪ್ರಯೋಗ ನಡೆದಾಗ ಕೆಂಪು ದನಗಳ ಬಣ್ಣವು ಬಿಳಿಯಾಯಿತು. ಕೆಂಬೋವೋ ಎಂಬಲ್ಲಿ ಒಂದು ಕರುಬೆಕ್ಕು ಅರ್ಧ ಬಿಳಿಯಾಯಿತು

ಹೆಂಡತಿಯಿಂದ ತಪ್ಪಿಸಿಕೊಳ್ಳಲು ಜೈಲುಬೇಡಿದ ಗಂಡ

ಇಲ್ಲಿನೊಯಿಸ್‌ದಲ್ಲಿರುವ ಸ್ಪ್ರಿಂಗ್ ಫೀಲ್ಡ್ ಎಂಬಲ್ಲಿ ಓರ್ವನು ನೇರಾಗಿ ಪೋಲೀಸು ಆಫೀಸರೊಡನೆ ಅವಸರವಸರವಾಗಿ ಮಾತನಾಡಲಾರಂಭಿಸಿದ. ವಿಷಯವೇನೆಂದು ವಿಚಾರಿಸಲಾಗಿ ' ಅಕ್ಕೊಳ್ಳಿ, ನನ್ನ ಪತ್ನಿ, ನನ್ನನ್ನು ಹಿಂಬಾಲಿಸಿ ಬರುತ್ತಿರುವಳು. ಅವಳ ಕೈಯಿಂದ ಒಮ್ಮೆ ಪಾರಾಗಬೇಕಾಗಿದೆ. ದಯವಿಟ್ಟು ನನ್ನನ್ನು ಜೈಲಿನಲ್ಲಿ ಒಂದು ಕೋಣೆಯಲ್ಲಿ ಸೇರಿಸಿ ಬೇಗ ಮುದ್ರೆ ಮಾಡಿ ' ಎಂದು ಕಂಜೋಡಿಸಿ ಬೇಡಿದನಂತೆ.

ರಣಜಿತ್ ಟ್ರೋಫೀಸಿನಲ್ಲಿ ವಾಳೆಯಿಂದ "ನಜ್ಮ"

ಆಹಾರ ಆರೋಗ್ಯವು ಜನಾಂಗದ ಸಂಪತ್ತು

ಪಂಡಿತ ಜವಹರಲಾಲ ನೆಹರುರವರು ಇತ್ತೀಚೆಗೆ ಕಲ್ಕತ್ತಾದ ಒಂದು ಬ್ಲಡ್ ಬ್ಯಾಂಕಿಗೆ ರಕ್ತದಾನ ನೀಡಿದ್ದರಷ್ಟೆ. ಇದನ್ನು ಕುರಿತು ಕಾನ್ಪುರದಲ್ಲಿನ ಡಿಡ ವಿದ್ಯಾರ್ಥಿನಿಯರ ಒಂದು ಸಭೆಯಲ್ಲಿ ತೀವ್ರ ನಿಷೇಧ ಸೂಚಿಸಲಾಯಿತು. ' ಜವಹರರ ಆರೋಗ್ಯವು ಜನಾಂಗದ ಸಂಪತ್ತು ; ಅನುದಿನದಂದ ರಾಷ್ಟ್ರದ ಹಿತದ ದೃಷ್ಟಿಯಲ್ಲಿ ಅದನ್ನು ಜತನದಿಂದ ಕಾಪಾಡಬೇಕು. ಈ ರೀತಿಯ ಬಲಿದಾನಗಳು ಪ್ರಮುಖ ರಾಷ್ಟ್ರವೀರರಿಗೆ ಸಲ್ಲದು ' ಎಂಬ ಶರಾವನ್ನು ವಿದ್ಯಾರ್ಥಿನಿಯರು ಮಂಜೂರ್ಮಾಡಿದರು. (ಪ್ರ)

Mysore City Municipality

(Works Department)

NOTICE dated 8th January 1946

Sealed tenders will be received at the office of the Municipal Engineer up to 4 p. m. on 30--1--46 for constructing a Sheep Slaughter House at Kesare, Mysore. The work is estimated to cost about Rs. 50,000. Each tender must be accompanied by a deposit of Rs. 2,500 in cash or by a cheque on the Bank of Mysore Ltd. Design, Specification and details of work are available in the Office of the Municipal Enginer, Mysore. The supply of required quantities of cement and steel will be arranged by this o.,ise if required. For other rules, please see the Office Notice Board.

R. L. Raju.

Municipal Engineer

ಮೈಸೂರಿನಲ್ಲಿ ಪಾರ್ಲಿಮೆಂಟರಿಪ್ರಾತಿನಿಧ್ಯ

ಬ್ರಿಟಿಷ್ ಪಾರ್ಲಿಮೆಂಟರಿ ಪ್ರಾತಿನಿಧ್ಯವು ಮೊನ್ನೆ ಸಂಜೆ 5 ಘಂಟೆಗೆ ಮೈಸೂರಿಗೆ ಬಂದಿತು. ಪ್ರಾತಿನಿಧ್ಯದಲ್ಲಿ ಮಿ॥ ನಿಕಲ್ಸನ್ ಮತ್ತು ಲಾರ್ಡ್ ಷಾರ್ಲಿ ಮಾತ್ರವಿದ್ದರು. ಪ್ರತಿನಿಧ್ಯದೊಡನೆ ಮೈಸೂರು ಸರಕಾರದ ಪ್ರದಾನ ಕಾರ್ಯದರ್ಶಿ ಶ್ರೀ ವೆಂಕಟಸುಬ್ಬಾ ಸಾಸ್ತ್ರಿಯಾರೂ ಆಗಮಿಸಿದರು. ರಾತ್ರಿ ಪ್ರಾತಿನಿಧ್ಯವು ದೀಪದ ನಗರವಾದ ಬೃಂದಾವನಕ್ಕೆ ಭೇಟಿ ಇತ್ತು ವಾಪಸ್ ಬಂದಿತು.

ಪ್ರಭು ಭೇಟಿ

ನಿನ್ನೆಯ ದಿವಸ ಬೆಳಿಗ್ಗೆ ಪ್ರಾತಿನಿಧ್ಯವು ಮಹಾರಾಜಪ್ರಭುಗಳೊಡನೆ ಭೇಟಿ ನಡೆಸಿ ಆರೆ ತಾಸು ಸಂಭಾಷಿಸಿತು.

ಖಾಸಗೀ ಭೇಟಿಗಳು

ಶ್ರೀಮತಿ ಕೆ. ಡಿ. ರುಕ್ಮಿಣಮ್ಮನವರು ಪ್ರಾತಿನಿಧ್ಯದೊಂದಿಗೆ ನಡಸಿದ ಭೇಟಿಯಲ್ಲಿ, ಶ್ರೀಮನ್ಮಹಾರಾಜರವರ ಆಳ್ವಿಕೆಯು ಆಶ್ಚರ್ಯದಲ್ಲಿ ಸರ್ವ ಸುಖವೂ ದೊರೆತಿರುವುದಾಗಿ ತಿಳಿಸಿ, ಸ್ತ್ರೀ ಪುರುಷ ಸ್ವಾತಂತ್ರ್ಯವು ಸಮನಾಗಿರಬೇಕೆಂದು ತಿಳಿಸಿದರು.

'ಕ್ವಿಟ್ ಇಂಡಿಯಾ' ಮತ್ತು 'ಪಾಕಿಸ್ತಾನ' ಗಳನ್ನು ಕುರಿತು, ದಾವ್ ಬಹದ್ದೂರ್ ರಾಮಸ್ವಾಮಿಯವರು ಕೇಳಿದ ಮಹದ್ಪ್ರಶ್ನೆಗಳಿಗೆ ಪ್ರಾತಿನಿಧ್ಯವು ನಕ್ಕು ಸುಮ್ಮಗಾಯಿತು.

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು 'ವಿದ್ಯಾರ್ಥಿಗಳು ರಾಜಕೀಯ ರಂಗಕ್ಕೆ ಧುಮುಕಬಹುದೇ' ಎಂಬುದಾಗಿ ಪ್ರಶ್ನಿಸಿದರು. ಪ್ರಾತಿನಿಧ್ಯದ ಸದಸ್ಯ ಮಿ॥ ನಿಕಲ್ಸನ್ನರು ಅಲಕ್ಷ್ಯೋತ್ತರವನ್ನು ಕೊಡುತ್ತಾ, 'ಇದೇ ರೀತಿ ಬೆಂಗಳೂರಿನಲ್ಲಿ ವಿದ್ಯಾರ್ಥಿ ಮುಖಂಡರೊಬ್ಬರು ಪ್ರಶ್ನಿಸಿದರು. ವಿದ್ಯಾರ್ಥಿಗಳು ಇಚ್ಛಾಶಯಿಚ್ಛೆ ಪ್ರಕಾರ ಆಸುಸರಿಸುವರು. ಪ್ರತಿಯೊಂದು ದೇಶದ ನಡವಳಿಕೆಯು ಈ ತೆರನಾಗಿರುವುದು' ಎಂದರು.

ಸುಪ್ರಸಿದ್ಧ ಪತ್ರಿಕೋದ್ಯೋಗಿಗಳೂ, ಕಲಾಕೂಟದ ಕಾರ್ಯದರ್ಶಿಗಳೂ ಆದ ಶ್ರೀಮಾ॥ ಶ್ರೀಕಾಂತರು ಪ್ರಶ್ನಿಸಿದ ಮಹದ್ವಿಷಯಗಳಿಗೆ ಮಿ॥ ನಿಕಲ್ಸನ್ನರು ಉತ್ತರವಿತ್ತರು.

ಪ್ರಶ್ನೆ— ನೀವು ಭಾರತೀಚಲನಚಿತ್ರಗಳನ್ನು ನೋಡಿದ್ದೀರಾ? ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನದ ಚಿತ್ರವನ್ನು ನೋಡಿದ್ದೀರಾ?

ಉ— ಇಲ್ಲ.

ಪ್ರ— ಹಾಗಾದರೆ ನೀವು ಭಾರತಕ್ಕೆ ಬಂದ ಉದ್ದೇಶ—

ಉ— ಚಿತ್ರಗಳನ್ನು ನೋಡುವುದಕ್ಕಲ್ಲ.

ಪ್ರ— ಭಾರತ ದೇಶದ ಚಿತ್ರಗಳನ್ನು ನೋಡಿದರೆ ಸಕಲವೂ ವೇದ್ಯವಾಗುವುದು. ಹಾಗೆಲ್ಲ ನಿದ್ದರೆ ನಿಮ್ಮ ಪ್ರಯತ್ನವು ಸಫಲವಾಗುವುದಿಲ್ಲ. ನಮ್ಮ ಸಂಸ್ಕೃತಿ, ಆಕಾಂಕ್ಷೆ, ಇತ್ಯಾದಿಗಳೆಲ್ಲವನ್ನೂ ನೀವು ಚಲನಚಿತ್ರ ಪ್ರೇಕ್ಷಣೆಯಿಂದ ಗ್ರಹಿಸಿಕೊಳ್ಳುವುದು ಸುಲಭ. ನಮ್ಮನ್ನೆ ಊರುಗೆಳನ್ನು ಅಲೆದು ಬೀದಿಗಳನ್ನು ಸುತ್ತಿದರೆ ಸಾಧ್ಯವಿಲ್ಲ.

ಉ— ಆಗಲಿ, ನೋಡುತ್ತೇನೆ.

At Ranjit

2 nd Week

Vish Kanya

ಸಾಧನ ಜೋಸ್, ಪೃಥ್ವಿರಾಜ್

ಅಭಿನಯಿಸಿರುವ

ವಿಷಕನ್ಯ

—ಹಸಕ್ ಬಿಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

At Opera—

5 ನೇ ವಾರ

ತ್ಯಾಗರಾಜ ಭಾಗವತರ್ — ನಾಗಯ್ಯ

ಕನ್ನಾಂಬಾ ಪಾತ್ರವಹಿಸಿರುವ

ಅಶೋಕ ಕುಮಾರ

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಪೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು

ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ರಕ್ತವರ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಅಶ್ವಕೃಷ್ಣ ಧಾ

ಬೆಲೆ ಡಬ್ಬಿಗೆ ೧ ರೂಪಾಯಿ ೮ ಆಣೆ.

ವಿಳಾಸ— ಕೃಷ್ಣಸುಧಾ, ೧೮೬೭ ಚಾಮರಾಜಾಗ್ರಹಾರ, ಮೈಸೂರು